ಇಲ್ಲವೋ, ಎಂದು ತಿಳಿಯುವುದಿಲ್ಲ. ಒಂದು ವೇಳೆ ಅಷ್ಟೊತ್ತಿನಲ್ಲಿದ್ದರೆ ಆಡಳಿತವನ್ನು ನಡೆಸಲು ಇದಕ್ಕೆ ಶಕ್ತಿ ಇದೆಯೋ ಇಲ್ಲವೋ, ಎನ್ನುವ ಅನುಮಾನ ನನಗೆ ಬರುತ್ತಿದೆ. ಅದೇ ಆಲ್ಲದೆ ಈ ಕ್ವಾರಿಯನ್ನು ಕಂಟ್ರಾಕ್ಟರ್‌ಗಳಿಗೆ ಏನಾದರೂ ಲೀಸ್‌ಗೆ ಕೊಟ್ಟಿದ್ದೀರಾ ಎಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯ ಸರ್ಕಾರಕ್ಕೆ ಆಡಳಿತವನ್ನು ನಡೆಸುವ ಶಕ್ತಿ ಇದೆ. ಆದರಲ್ಲಿ ಅನುಮಾನವೇ ಬೇಡ. ಹಿಂದೆ ಇಂಥ ಪ್ರಸಂಗಗಳು ಬಂದಾಗ ಸರ್ಕಾರ ಕ್ರಮ ತೆಗೆದುಕೊಂಡಿದೆ. ಈ ರೀತಿ ವಸೂಲ್ಮಾಡುವುದನ್ನು ನಿಲ್ಲಿಸುವುದಕ್ಕೆ ನಾವು ಉಗ್ರ ಕ್ರಮವನ್ನು ತೆಗೆದುಕೊಂಡಿದ್ದೇವೆ. ಕೇವಲ ಮೈನ್ಸ್ ಅಂಡ್ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಒಂದೇ ಅಲ್ಲ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಬಾಬುಗಳಲ್ಲಿ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣ ಸೋರಿಹೋಗುತ್ತಿದೆ, ಅದನ್ನು ಪರಿಶೀಲಿಸಲು ಮತ್ತು ತಡೆಗಟ್ಟಲು ಇದ ವರೆಗೆ ನಮ್ಮ ಸಿಬ್ಬಂದಿಯ ಕೊರತೆ ಇತ್ತು. ಆದರೆ **ಈಗ** ಇದಕ್ಕಾಗಿ ಒಂದು ಸ್ಕ್ವಾಡನ್ನೇ ನೇಮಕ ಮಾಡಿದ್ದೇವೆ. ನಮ್ಮ ಹೊಸ ಸರ್ಕಾರ ಬಂದ ಮೇಲೆ ರಾಜ್ಯದ ಬೊಕ್ಕಸಕ್ಕೆ ಸುಮಾರು 8–10 ಕೋಟಿ ರೂಪಾಯಿಗಳಷ್ಟು ಆದಾಯ ಮೈನ್ಸ್ ಅಂಡ್ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನಿಂದ ಬರುತ್ತಿದೆ.

ಒಬ್ಬ ಮಾನ್ಯ ಸದಸ್ಯರು. ಈಗ ಕನಕಪುರದಲ್ಲಿ ವಸೂಲ್ಮಾಡುತ್ತಿದ್ದಾರೆ. ಇದಕ್ಕೆ ಹಿಂದಿನ ಸರ್ಕಾರದವರೇ ಅನುಮತಿಯನ್ನು ಕೊಟ್ಟಿದ್ದಾರೆ. ಇದು ಹೊಸದೇನು ಅಲ್ಲ. ಈ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದ್ದರೂ ಕೂಡ ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ ಆಷ್ಟೇ.

ಶ್ರೀ ಬಿ. ದೊಡ್ಡ ಬೋರೇಗೌಡ —ಸ್ವಾಮಿ, ಈ ಮನೆಯ ಯಾವ ಸದಸ್ಯರೇ ಆಗಲಿ, ಆ ಕಲ್ಲುಗಳನ್ನು ಸಾಗಿಸಲು ಅನುಮತಿ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ. — ಅಥಾವಂದ್ದು ಯಾವುದೂ ಇಲ್ಲ. ಆದರೆ ಹಿಂದೆ ಯಾರೋ ಒಬ್ಬರು ಲೋಕಸಭಾ ಸದಸ್ಯರು ಅರ್ಜಿಯನ್ನು ಇದಕ್ಕಾಗಿ ಸಲ್ಲಿಸಿದ್ದರು. ಆದರೆ ಅವರಿಗೂ ಕೂಡ ಅನುಮತಿ ಕೊಟ್ಟಿಲ್ಲ.

ಶ್ರೀ ಕೆ. ಜೆ. ಶ್ರೀನಿವಾಸಮೂರ್ತಿ.—ಹಂತ ಹಂತವಾಗಿ ಗುತ್ತಿಗೆಯನ್ನು ಬೇರೆಯವರಿಗೆ ಕೊಡುವುದನ್ನ ತಪ್ಪಿಸಿ ಎಂ. ಎಂ. ಎಲ್. ನವರಿಗೇ ಕೊಡುವುದಾಗಿ ತಾವು ಅಪ್ಪಣೆ ಕೊಡಿಸಿದ್ದೀರಿ. ಈ ಕೆಲಸವನ್ನು ಇನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ನಮ್ಮ ರಾಜ್ಯ ಸರ್ಕಾರದ ಪರಿಮಿತಿಯಲ್ಲಿಲ್ಲವಾದ್ದರಿಂದ ಇದರ ಬಗ್ಗೆ ನಾವು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡುತ್ತಿದ್ದೇವೆ

ವಿಷಯ : ಹುಕ್ಕೆರಿ ತಾಲ್ಲೂಕಿನ ಹಿರಣ್ಯಕೇಶಿ ನದಿಯ ಮೇಲೆ ಗೋಟೂರು ವೇಯರ್ ಹಾಗೂ ಕೋಚರಿ ವೇಯರ್‌ಗಳ ಮಾಹಿತಿ ಬಗ್ಗೆ.

ಪ್ರಶ್ನೆ. 163(127) ಶ್ರೀ ಮಲ್ಲಪ್ಪರಗೌಡ ಎಸ್. ಪಾಟೀಲ್ (ಸಂಕೇಶ್ವರ). — ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹಿರಣ್ಯಕೇಶಿ ನದಿಯ ಮೇಲೆ ಇದ್ದ ಗೋಟೂರು ವೇಯರ್, ಕಟ್ಟಡಕ್ಕಾಗಿ ತಗುಲಿದ ಪೆಚ್ಚ ಖರ್ಚು ಎಷ್ಟು ;

ಆ) ಈ ವೇಯರನ್ನು ನಿರ್ಮಾಣ ಮಾಡಲು ಕಾರಣಗಳೇನು ;

ಇ) ಈ ವೇಯರದಲ್ಲಿ ಎಷ್ಟು ಟಿ. ಎಂ. ಸಿ. ನೀರು ಸಂಗ್ರಹಣೆ ಆಗುತ್ತದೆ.

ಈ) ಕಳೆದ ಐದು ವರ್ಷದಲ್ಲಿ ಗೋಟೂರು ವೇಯರ್‌ನಲ್ಲಿ ನೀರು ಬತ್ತಿಹೋದ ಪ್ರಾರಂಭದ ತಿಂಗಳು ಹಾಗೂ ಮಳೆಗಾಲದಲ್ಲಿ ನೀರು ಬಂದ ತಾರೀಖು ಯಾವುದು.

ಉ) ಕೋಚೆರಿ ವೇಯರಕ್ಕಾಗಿ ತಗಲಿದ ಖರ್ಚು ಎಷ್ಟು ;

ಊ) ಇದರಲ್ಲಿ ಎಷ್ಟು ಟಿ. ಎಂ. ಸಿ. ನೀರು ನಿಲ್ಲುತ್ತದೆ. ?

ಉತ್ತರ. ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು). —

ಅ) 1,44,200 ರೂ.ಗಳು ಆ) ನೀರಾವರಿ ಸೌಲಭ್ಯ ಒದಗಿಸಲು ಈ ವೇಯರನ್ನು ಕಟ್ಟಲಾಯಿತು. ಇ) 0.165 ಟಿ. ಎಂ. ಸಿ.

ಈ) ಸಾಮಾನ್ಯವಾಗಿ ಮಳೆಗಾಲದ ಆರಂಭ ಅಂದರೆ ಜೂನ್ ತಿಂಗಳಲ್ಲಿ ನದಿಯಲ್ಲಿ ಪ್ರವಾಹ ಪ್ರಾರಂಭವಾಗುತ್ತದೆ. ಮತ್ತು ಫೆಬ್ರುವರಿ ತಿಂಗಳಲ್ಲಿ ನೀರು ಬತ್ತಿ ಹೋಗುತ್ತದೆ. ಆದರೆ ನಿರ್ದಿಷ್ಟ ತಾರೀಖು ಹೇಳಲು ಆಗುವುದಿಲ್ಲ. ಉ) 1,14,619 ರೂ.ಗಳು. ಊ) 0.072 ಟಿ. ಎಂ. ಸಿ.

ಶ್ರೀ ಮಲ್ಲಾರಗೌಡ ಎಸ್ ಪಾಟೀಲ್.—ಸ್ವಾಮಿ, ಗೋಟೂರು ವೇಯರ್ ಕಟ್ಟಡಕ್ಕಾಗಿ 1,44,200 ರೂ.ಗಳು ಖರ್ಚಾಗಿದೆ ಎಂದು ಹೇಳಿದ್ದೀರಿ. ನನಗೆ ತಿಳಿದಿರುವಂತೆ ಈ ಕಟ್ಟಡಗಳು 20 ವರ್ಷಕ್ಕಿಂತ ಮುಂಚಿತವಾಗಿ ಕಟ್ಟಲಾಗಿದೆ. ಈ ನೀರಾವರಿ ಪ್ರವೇಶದ ಟ್ಯಾಕ್ಸ್‌ನ್ನು ವಜಾ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಫೆಬ್ರುವರಿ ತಿಂಗಳಿನಿಂದ ಇದರಲ್ಲಿ ನೀರು ಬತ್ತಿ ಹೋಗುತ್ತ

ದೆಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಘಟಪ್ರಭಾ ಬಲದಂಡೆ ಕಾಲುವೆಯಿಂದ ಈ ನೀರಾವರಿ ಪ್ರದೇಶಕ್ಕೆ ನೀರನ್ನು ಜೂನ್ ತಿಂಗಳವರೆಗೆ ಕೊಡುತ್ತೀರಾ ಎಂದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—1670 ಎಕರೆಗೆ ಕೋಚರಿ ಪೇಯರ್‌ನಿಂದ ಮತ್ತು 708 ಎಕರೆಗೆ ಆಣೆಕಟ್ಟಿನಿಂದ ನೀರು ಬರುತ್ತದೆ. ಈಗ್ಗೆ 20 ವರ್ಷಗಳ ಹಿಂದೆ ಮಹಾರಾಷ್ಟ್ರದವರು ಮಾಡಿದ ಕೆಲಸ ಇದು. ಇದು ಮಳೆಗಾಲದಲ್ಲಿ ಹೆಚ್ಚು ಪ್ರವಾಹ ಬಂದು ಪೂರ್ತಿಯಾಗಿ ತುಂಬಿ ಹರಿಯುತ್ತದೆ, ಮತ್ತು ಬೇಸಿಗೆಯಲ್ಲಿ ಬತ್ತಿಹೋಗುತ್ತದೆ. ಆದರೆ ಇದಕ್ಕೆ ಬೇರೆ ಕಡೆಯಿಂದ ನೀರನ್ನು ತರುವ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಆ ಭಾಗದ ಕಬ್ಬಿನ ಪ್ರದೇಶದಿಂದ ಕೂಡ ಈ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಬರುತ್ತಿದೆ. ಆಲ್ಲಿ 3 ತಿಂಗಳವರೆಗೆ ನೀರು ಇಲ್ಲದೇ ಹೋದರೆ ಅಲ್ಲಿನ ಕಬ್ಬು ಬೆಳಿಗಾರರಿಗೆ ಬಹಳ ನಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ. ಒಂದೇ ಒಂದು ಕಾಲುವೆಯಲ್ಲಿ ನೀರನ್ನು ಕೊಚೆರಿ ಮತ್ತು ಗೋಟೂರು ವೇಯರ್‌ಗೆ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೆ ಎನ್ನುವ ಬಗ್ಗೆ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಗಮನಿಸಿದ್ದೇನೆ. ಈ ಬಗ್ಗೆ ಈ ಸದನದಲ್ಲೇ ಖಚಿತವಾದ ಉತ್ತರವನ್ನು ಮುಂದಿನ ದಿನಗಳಲ್ಲಿ ನಾನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sub : Lift Irrigation scheme at Ingli village, Chikodi Taluk, Belgaum District

Qn No . 165(504) Sri A.A. Nimbalkar(Sadalga).—will the Minister of State for Minor Irrigation be pleased to state that :—

a) When the L. I scheme at Ingli village Taluk Chikodi District Belgaum was started ;

b) The amount spent on it ;

c) Whether the scheme has been completed ?

Sri R. N Lakshmipathy (Minister of State for Minor Irrigation.— a) February 1976 b) Rs. 18,89,917.27.

c) Project is under execution.

Hon'ble Member Absent

ವಿಷಯ : ಹರಪನ ಹಳ್ಳಿ ತಾಲ್ಲೂಕು ನೀರಾವರಿ ಯೋಜನೆ ಬಗ್ಗೆ

ಪ್ರಶ್ನೆ. 164(547) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನ ಹಳ್ಳಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ : —

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕೈಕೊಂಡ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ;

ಆ) ಇವುಗಳಲ್ಲಿ ಪೂರ್ತಿಗೊಂಡಿರುವ ಹಾಗೂ ಪೂರ್ತಿಗೊಳ್ಳದಿರುವ ಯೋಜನೆಗಳ ಸಂಖ್ಯೆ ಎಷ್ಟು;

ಉತ್ತರ ಶ್ರೀ ಆರ್. ಎನ್ ಲಕ್ಷ್ಮೀಪತಿ ಸಣ್ಣ ನೀರಾವರಿ ಸಚಿವರು.—

ಅ) 1978 ರಿಂದ ಈಚೆಗೆ 25

ಆ) ಪೂರ್ಣಗೊಂಡ ಯೋಜನೆಗಳು 23, ಪೂರ್ಣಗೊಳ್ಳದಿರುವ ಯೋಜನೆಗಳು 2.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ, ಅರಸೀಕೆರೆಯ ಕೆಲಸ 2 ವರ್ಷದಿಂದ ಹಾಗೇ ನಿಂತಿದೆ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.— ಹಲವಾಗಿಲು, ದುಗ್ಗಾವತಿ ಈ ಎರಡು ಕೆರೆಗಳು ಇನ್ನೂ ಪೂರ್ತಿ ಆಗಿಲ್ಲ. ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ 43 ಕೆರೆಗಳ ಪೈಕಿ 23 ಕೆರೆಗಳ ಕೆಲಸ ಪೂರ್ತಿ ಆಗಿದೆ. ಅರಸೀಕೆರೆ ಕೆರೆಯ ವಿಚಾರಕ್ಕೆ ಸಂಬಂದಪಟ್ಟಂತೆ ಮಾಹಿತಿಗಳು ಈಗ ನನ್ನ ಹತ್ತಿರ ಇಲ್ಲ.

ಅಧ್ಯಕ್ಷರು.— ಚು. ಪ್ರ. 165 (504)

ಮಾನ್ಯ ಸದಸ್ಯರು ಹಾಜರಿಲ್ಲ.

ವಿಷಯ : ಕೃಷ್ಣ ಮೇಲ್ದಂಡೆ ಯೋಜನೆ.

ಪ್ರಶ್ನೆ : 166(160) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—